**ಕೃಷಿ ವಿಶ್ವ ವಿದ್ಯಾನಿಲಯ**
**ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)**
**ಜಿ.ಕೆ.ವಿ.ಕೆ., ಬೆಂಗಳೂರು–560065**

*** ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ ***

**ದಿನಾಂಕ:** 13.05.2022

# ಬೆಂಗಳೂರು ನಗರ ಜಿಲ್ಲೆಗೆ ಸೀಮಿತವಾಗಿದೆ.

## ಕಳೆದ ಐದು ದಿನಗಳ ಹವಾಮಾನ ಸಾರಂಶ

| ನಿಯತಾಂಕಗಳು | 09.5.2022 | 10.5.2022 | 11.5.2022 | 12.5.2022 | 13.5.2022 |
|---|---|---|---|---|---|
| ಮಳೆ (ಮಿ ಮೀ) | 5.0 | 19.8 | 2.2 | 2.0 | 0 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 32.6 | 30.8 | 27.0 | 25.0 | 23.8 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 20.0 | 18.0 | 20.0 | 18.2 | 19.6 |
| ಮೋಡ ( ಪ್ರಮಾಣ) | 2 | 8 | 8 | 8 | 6 |
| ಆರ್ದ್ರತೆ 7.20 ಬೆ (ಶೇ) | 85 | 91 | 95 | 91 | 89 |
| ಆರ್ದ್ರತೆ 2.20 ಮ (ಶೇ) | 44 | 72 | 72 | 82 | -- |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 3.5 | 7.6 | 7.1 | 9.5 | 7.4 |
| ಗಾಳಿಯ ದಿಕ್ಕು ( ಡಿಗ್ರಿ) | 230 | 230 | 230 | 270 | 270 |

## ಈ ವಾರದ ಹವಾಮಾನ ಮುನ್ಸೂಚನೆ (ಭಾರತೀಯ ಹವಾಮಾನ ಇಲಾಖೆ)

**(ದಿನಾಂಕ 14–05–2022 ರಿಂದ 18–05–2022 ವರೆಗೆ)**

| ನಿಯತಾಂಕಗಳು | 14.5.2022 | 15.5.2022 | 16.5.2022 | 17.5.2022 | 18.5.2022 |
|---|---|---|---|---|---|
| ಮಳೆ (ಮಿ ಮೀ) | 4 | 3 | 2 | 2 | 3 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 25 | 26 | 27 | 28 | 29 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 21 | 21 | 21 | 22 | 22 |
| ಮೋಡ ( ಪ್ರಮಾಣ) | 8 | 5 | 5 | 5 | 5 |
| ಆರ್ದ್ರತೆ 7.20 ಬೆ (ಶೇ) | 93 | 93 | 93 | 91 | 93 |
| ಆರ್ದ್ರತೆ 2.20 ಮ (ಶೇ) | 88 | 88 | 88 | 85 | 87 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 3 | 4 | 5 | 4 | 4 |
| ಗಾಳಿಯ ದಿಕ್ಕು ( ಡಿಗ್ರಿ) | 252 | 257 | 281 | 292 | 270 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ **25.0-29.0$^{o}$C** ಮತ್ತು ಕನಿಷ್ಠ **21.0-22.0$^{o}$C** ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ **91-93** % ಇದ್ದು ಮಧ್ಯಾಹ್ನ **85-88** % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **3-5** ಕಿ.ಮೀ. ವೇಗದಲ್ಲಿ ಬೀಸುವ ಸ೦ಭವವಿದೆ.

- ಕೃತ್ತಿಕ ನಕ್ಷತ್ರದ ಮಳೆಯ ಕಾಲವು ಮೇ ತಿಂಗಳ 11 ರಿಂದ ಮೇ 24 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 48.6 ಮಿ.ಮೀ. ವರೆಗೆ ಮಳೆಯಾಗುತ್ತದೆ.

## ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಬೆಳೆಯ ಹಂತ | ಕೃಷಿ ಸಲಹೆಗಳು |
|---|---|---|
| ಸಾಮಾನ್ಯ ಸಲಹೆಗಳು | | 1. 2022 ರ ಮುಂಗಾರು ಮಳೆಯ ಮಾರುತಗಳು ಅಂಡಮಾನ್ ಮತ್ತು ನಿಕೋಬಾರ್ ದ್ವೀಪದಿಂದ ಬಂಗಾಳ ಕೊಲ್ಲಿಯ ಸುತ್ತಮುತ್ತ ಮೇ 15 ರಂದು ಅಪ್ಪಳಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.<br>2. ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ **ಈ ವರ್ಷದ ಮುಂಗಾರು** ದೇಶದಾದ್ಯಂತ ಒಟ್ಟಾರೆಯಾಗಿ **ಸಾಮಾನ್ಯವಾಗಿದ್ದು**, ದೀರ್ಘಾವಧಿ ಸರಾಸರಿಯು 98 % ಇರಬಹುದೆಂದು ಅಂದಾಜಿಸಲಾಗಿದೆ. |

| | | |
|---|---|---|
| | | 3. **2 ನೇ ಹಂತದ ಮುನ್ಸೂಚನೆ – ಮೇ ಕೊನೆಯ ವಾರದಲ್ಲಿ :** ನವೀಕರಿಸಿದ ಮುಂಗಾರು ಮುನ್ಸೂಚನೆ, ಜೂನ್ ತಿಂಗಳಿನ ಮಳೆಯ ಸಾಧ್ಯತೆ ಮತ್ತು ಮುಂಗಾರು ಕೇರಳವನ್ನು ಪ್ರವೇಶಿಸುವ ದಿನಾಂಕವನ್ನು ಮೇ ಕೊನೆಯ ವಾರದಲ್ಲಿ ನೀಡಲಾಗುವುದು.<br>4. ಬೇಸಿಗೆ ಉಳುಮೆ ಮಾಡುವುದರಿಂದ ಹುಳುಗಳ ವಿವಿಧ ಹಂತಗಳನ್ನು ನಾಶಪಡಿಸಬಹುದು ಮತ್ತು ಕಳೆಗಳನ್ನು ನಿಯಂತ್ರಿಸಬಹುದು.<br>5. ಉತ್ತಮ ಮಳೆಯ ಅವಕಾಶ ಇರುವುದರಿಂದ ಬದುಗಳ ಸುತ್ತಲು ಮೇವಿನ ಹುಲ್ಲಿನ ಬೀಜಗಳನ್ನು ಬಿತ್ತನೆ ಮಾಡಿ ಇದರಿಂದ ಬದುಗಳು ಭದ್ರವಾಗಿರುತ್ತವೆ ಮತ್ತು ಜಮೀನುಗಳಲ್ಲಿ ನೀರಿನ ತೇವಾಂಶವನ್ನು ಕಾಪಾಡುತ್ತದೆ.<br>6. ಕೆರೆಗಳಲ್ಲಿ ಗೋಡು ಮಣ್ಣನ್ನು ತೆಗೆದು ಭೂಮಿಗೆ ಸೇರಿಸುವುದರಿಂದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬಹುದು.<br>7. ಹಿಂಗಾರಿ ಬೆಳೆಗಳ ಉಳಿಕೆಗಳನ್ನು ಸುಡಬಾರದು, ಅದನ್ನು ಗೊಬ್ಬರ ತಯಾರಿಸಲು ಉಪಯೋಗಿಸಬೇಕು.<br>8. ತೊಗರಿ ಬೆಳೆ ಕಟಾವು ಮಾಡಿ ಅಲ್ಲಿನ ಕಡ್ಡಿಗಳನ್ನು ರಾಶಿ ಮಾಡಿ ಸ್ವಚ್ಛಮಾಡಿ ಇದರಿಂದ ಸೊರಗು ರೋಗವು ಮುಂದಿನ ಬೆಳೆಗೆ ಹರಡುವುದನ್ನು ತಡೆಯಬಹುದು. |
| ಮಾವು | ಕಾಯಿ ಬಲಿಯುವ ಹಂತ | 1. ಹೆಚ್ಚು ಗಾಳಿ ಮತ್ತು ಮಳೆಯಿಂದಾಗಿ ಮಾವಿನಲ್ಲಿ ಹಣ್ಣುಗಳು ಉದುರುವುದು ಸಾಮಾನ್ಯವಾಗಿರುತ್ತದೆ ಮತ್ತು ಹಣ್ಣಿನ ನೊಣಗಳ ಹಾವಳಿ ಕೂಡ ಹೆಚ್ಚಾಗಿ ಕಂಡುಬರುತ್ತದೆ, ಇದರ ಹತೋಟಿಗೆ ಕಾರ್ಬರಿಲ್ 4 ಗ್ರಾಂ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ.<br>2. ಹೂ ಬಿಡುವುದಕ್ಕೆ ಮುಂಚೆ ಹಾಗೂ ಕಾಯಿ ಕಚ್ಚಿದ ಕೂಡಲೇ ಜಿಗಿಹುಳು ಮತ್ತು ಬೂದಿರೋಗದ ನಿಯಂತ್ರಣಕ್ಕಾಗಿ ಗಿಡಗಳಿಗೆ 4ಗ್ರಾಂ ಕಾರ್ಬರಿಲ್ (50 wp) ಅಥವಾ 0.3 ಮಿ.ಲೀ ಇಮಿಡಾಕ್ಲೋಪ್ರಿಡ್ 200.ಎಸ್.ಎಲ್ ಅಥವಾ 0.5 ಮಿ.ಲೀ ಲ್ಯಾಂಬ್ಡಾ ಸೈಯೋಲೋಥ್ರಿನ್ (5 ಇಸಿ) ಜೊತೆಗೆ 3ಗ್ರಾಂ. ನೀರಿನಲ್ಲಿ ಕರಗುವ ಗಂಧಕ (ಸಲ್ ಟಾಫ್ 80wp) ಪ್ರತಿ ಲೀಟರ್ ನೀರಿನಲ್ಲಿ ಮಿಶ್ರ ಮಾಡಿ ಸಿಂಪಡಿಸಿ.<br>3. ಜಿಗಿಹುಳುವಿನ ಹಾವಳಿ ತೀವ್ರವಾಗಿದ್ದಲ್ಲಿ ಅಝಾಡಿರೆಕ್ಟಿನ್ (10,000 ಪಿ.ಪಿ.ಎಮ್) 7 ಮಿ.ಲೀ/ಲೀ ನೀರಿನಲ್ಲಿ ಸಿಂಪಡಿಸಿ.<br>4. ಮಾವಿನ ಗಿಡದ ಕೆಳಗೆ ಬೆಳೆದಿರುವ ಹುತ್ತಗಳನ್ನು ನಾಶಪಡಿಸಬೇಕು ಮತ್ತು ಗೆದ್ದಲು ಹುಳುಗಳನ್ನು ನಾಶಪಡಿಸಲು ಕ್ಲೋರೊಪೈರಿಫಾಸ್ 5–10 ಮಿ.ಲೀ/ಪ್ರತಿ ಲೀ ನಿರಿಗೆ ಬೆರಸಿ ಹುತ್ತಗಳಿಗೆ ಸುರಿಯಬೇಕು ಅಥವಾ ಒಂದು ಮೀಟರ್ ಸುತ್ತಳತೆ ಇರುವ ಹುತ್ತಕ್ಕೆ 2 ಅಲ್ಯೂಮಿನಿಯಂ ಫಾಸ್ಫೈಡ್ ಮಾತ್ರೆಗಳನ್ನು ಹಾಕಿ ಗಾಳಿ ಹೊರ ಹೋಗದಂತೆ ಎಲ್ಲಾ ರಂಧ್ರಗಳನ್ನು ಹಸಿ ಮಣ್ಣಿನಿಂದ ಮುಚ್ಚಿ. |
| **ರೇಷ್ಮೆ ಸಾಕಾಣಿಕೆ** | | 1. ರೇಷ್ಮೆ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು. |


**ನೋಡಲ್ ಅಧಿಕಾರಿ:**

ಕೃಷಿ ಹವಾಮಾನ ವಿಭಾಗ

**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**


**ಮೊಬೈಲ್ ಆಪ್:**

- ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.